ಅಧ್ಯಕ್ಷರು ; ಸೂಚನೆಯನ್ನೇ ಕೊಟ್ಟಿಲ್ಲವಲ್ಲಾ? ಸೂಚನೆಯನ್ನು ಕೊಡದೆ ಏಕಾಏಕಿ ತಮ್ಮ ಸ್ಥಳದಲ್ಲಿ ಎದ್ದು ನಿಂತು ಪ್ರಶ್ನೋತ್ತರ ರದ್ದು ಮಾಡಿ ಎಂದರೆ ಹೇಗೆ ಸದನ ನಡೆಸುವುದು? ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಇಂತಹ ಗಂಭೀರವಾದ ಪರಿಸ್ಥಿತಿಯನ್ನು ತಮ್ಮಲ್ಲಿ ಚರ್ಚೆ ಮಾಡಬೇಕಂಬ ಉದ್ದೇಶದಿಂದ ಅದಕ್ಕೋಸ್ಕರ ಬಂದೆ. ಆದರೆ ತಾವು ತರಾತುರಿಯಲ್ಲಿ ಒಳಗಡೆ ಬಂದಿರಿ ನಾನು ನಿಮ್ಮ ಹಿಂದೆ ಬಂದು ನಿಮ್ಮನ್ನು ಪ್ರಶ್ನೆ ಮಾಡತಕ್ಕಂಥದ್ದು ಸೌಜನ್ಯವಲ್ಲ ದಯಮಾಡಿ ಕ್ಷಮಿಸಬೇಕು. ಈ ವಿಚಾರದಲ್ಲಿ ನನ್ನಿಂದೇನಾದರೂ ಅಪರಾಧ ಆಗಿದ್ದರೆ ಕ್ಷಮಿಸಿ ಎಂದು ಕೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಅತ್ಯಂತ ಪ್ರಮಾಣಿಕವಾಗಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ತಮ್ಮಲ್ಲಿಯೂ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ಪ್ರಶ್ನೋತ್ತರ ಕಾಲವನ್ನು ರದ್ದು ಪಡಿಸಿ ತಾವು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಪ್ರಮುಖವಾದುದನ್ನು ಪ್ರಸ್ತಾಪ ಮಾಡಿದ್ದಾರೆ. ಬೆಳಗಾವಿ ನಮಗೆ ಸೇರಲೇಬೇಕಾಗುತ್ತದೆ, ಮಹಾಜನ್ ಆಯೋಗದ ತೀರ್ಪಿನ ವಿರುದ್ಧ ಯಾವುದೇ ವ್ಯಕ್ತಿ ಮಾಡನಾಡಲು ಸಾಧ್ಯವಿಲ್ಲ, ಕನ್ನಡ ನಾಡಿನ ಒಂದು ಇಂಚು ಕೂಡ ಹೊರಗಡೆ ಹೋಗುವ ಪ್ರಶ್ನೆ ಇಲ್ಲ, ಅವರು ಪ್ರಸ್ತಾಪ ಮಾಡಿರುವುದನ್ನು ಬೇರೆ ಸಮಯ ದಲ್ಲಿ ವಿಶೇಷವಾಗಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ. ಬಹಳ ಪ್ರಮುಖವಾದುದ್ದನ್ನು ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು ; ಕೊಡೋಣ, ಚರ್ಚೆ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ ; ಇಡೀ ಸದನ ಆ ಬೆಳಗಾಂನ ಒಂದು ಇಂಚು ನೆಲ ಆ ಕಡೆ ಈ ಕಡೆ ಹೋಗದ ಹಾಗೆ, ಯಾವುದೇ ಒಂದು ಅಡ್ಡಿ ಬರುವುದಕ್ಕೆ ಸಾಧ್ಯವಿಲ್ಲ, ಯಾವುದೇ ಶಕ್ತಿ ಆ ಒಂದು ಸಾಹಸ ಮಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ನಾನು ಹೇಳುವುದು ಏನೆಂದರೆ ಈ ನಿರ್ಣಯ ಇವತ್ತೇ ಆಗಬೇಕು, ಇಡೀ ಸದನದಲ್ಲಿ ಕೈ ಮುಗಿದು ಕೇಳುತ್ತಿದ್ದೇನೆ. ಪ್ರಶ್ನೋತ್ತರವನ್ನು ಬದಿಗೊತ್ತಿ ಈ ವಿಚಾರವನ್ನು ತೆಗೆದುಕೊಳ್ಳಬೇಕು, ಇದು ಬಾವಿ, ರಸ್ತೆ ಪ್ರಶ್ನೆ ಅಲ್ಲ, ಇಡೀ ಜೀವನ್ಮರಣದ ಪ್ರಶ್ನೆ. ಬೆಳಗಾವಿ ಜೀವನ್ಮರಣದ ಪ್ರಶ್ನೆ. ಈ ಬಗ್ಗೆ ನಾವು ಒಕ್ಕೊರಲಿನಿಂದ ನಿಲ್ಲಬೇಕು ಅನ್ನುವಂತಹ ಮಾತು ಹೇಳುತ್ತೇನೆ ತಮ್ಮ ವಿರುದ್ಧ ನಾನು ಹೋಗುತ್ತಾ ಇಲ್ಲ, ಮಹಾರಾಷ್ಟ್ರ ಸರ್ಕಾರದ ನೀತಿಯ ವಿರುದ್ಧ, ಕೇಂದ್ರ ಸರ್ಕಾರದ ನೀತಿಯ ವಿರುದ್ಧ ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್‌ನಾಗರಾಜರವರು ಸಭಾತ್ಯಾಗ ಮಾಡಿದರು).

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಜ್ಯದಲ್ಲಿ ಪಡಿತರದ ವಿತರಣೆ

367 : ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರ ಪಡಿತರ ವಿತರಣೆಗೆ ರಾಜ್ಯಕ್ಕೆ ಕೊಡುವ ಅಕ್ಕಿ ಹಾಗೂ ಗೋಧಿಯ ಬೆಲೆ ಎಷ್ಟು ಇದೆ?

ಆ) ರಾಜ್ಯದ ಬರಗಾಲ ಪೀಡಿತರ ಪ್ರದೇಶ ಬುಡಕಟ್ಟು ಜನರಿರುವ ಗುಡ್ಡಗಾಡು ಪ್ರದೇಶದ ಪಡಿತರಕ್ಕೆ ಕೇಂದ್ರ ಸರ್ಕಾರ ಎಷ್ಟು ಸಹಾಯಧನ ನೀಡುವುದು.

ಇ) ರಾಜ್ಯ ಸರ್ಕಾರಿ ಪಡಿತರ ಕಾರ್ಡುದಾರರಿಗೆ ಕೇಸರಿ ಕಾರ್ಡಿನ ಹಾಗೂ ತ್ರಿವರ್ಣ ಕಾರ್ಡುದಾರರಿಗೆ ವಿತರಣೆ ಮಾಡುವ ಅಕ್ಕಿ ಹಾಗೂ ಗೋಧಿಗೆ ಕಳೆದಹಣಕಾಸು ವರ್ಷದಲ್ಲಿ ಹಿಂದಿನ ಸರ್ಕಾರ ಮೇಲೆ ಸೂಚಿಸಿದ ಕಾರ್ಡುದಾರರಿಗೆ ನೀಡುವ ಅಕ್ಕಿ ಹಾಗೂ ಗೋಧಿಯ ಮೇಲೆ ಎಷ್ಟು ಸಹಾಯಧನ ನೀಡುತ್ತಿದ್ದು, ಪ್ರಸ್ತುತ ಸರ್ಕಾರ ಈಗ ಎಷ್ಟು ಸಹಾಯ ಧನ ನೀಡುತ್ತಿದೆ?

ಈ) ಪ್ರಸಕ್ತ ಸರ್ಕಾರ ಕೇವಲ ಅಕ್ಕಿಗೆ ಹೆಚ್ಚು ಸಬ್ಸಿಡಿ ಗೋಧಿ ಮೇಲೆ ಅದೇ ಪ್ರಮಾಣದ ಸಬ್ಸಿಡಿ ನೀಡದೆ ಗೋಧಿ ಬಳಕೆದಾರರಿಗೆ ತಾರತಮ್ಯ ಮಾಡಿದಂತಾಗುವುದಿಲ್ಲವೇ?

ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) 1) ಅಕ್ಕಿ ಅತ್ಯುತ್ತಮ 648-00 ಕ್ವಿಂಟಾಲ್ 1ಕ್ಕೆ

2) ಅಕ್ಕಿ ಉತ್ತಮ 617-00"

3) ಅಕ್ಕಿ ಸಾಮಾನ್ಯ 537-00"

4) ಗೋಧಿ 402-00"

ಆ) ಕ್ವಿಂಟಾಲ್ ಒಂದಕ್ಕೆ ರೂ. 50-00 ರಂತೆ ಸಹಾಯಧನವನ್ನು ನೀಡುತ್ತಿದೆ.

ಇ) ಅನುಬಂಧ 'ಅ' ನಲ್ಲಿ ಲಗತ್ತಿಸಿದೆ.

ಈ) ಈಗ ರಾಜ್ಯದ ಹಸಿರು ಪಡಿತರ ಚೀಟಿದಾರರಿಗೆ ಪೌಷ್ಟಿಕಾಂಶ ಹೆಚ್ಚಿಸುವ ಉದ್ದೇಶದಿಂದ ಪ್ರತಿ ಪಡಿತರ ಚೀಟಿ ಒಂದಕ್ಕೆ 10 ಕೆ.ಜಿ. ಅತ್ಯುತ್ತಮ ಅಕ್ಕಿಯನ್ನು ಕೆ.ಜಿ. 1ಕ್ಕೆ ರೂ. 3-20ರಂತೆ ವಿತರಣೆ ಮಾಡುತ್ತಿದ್ದು, ತ್ರಿವರ್ಣ ಪಡಿತರ ಚೀಟಿದಾರರಿಗೆ ರಿಯಾಯಿತಿ ದರದಲ್ಲಿ ಗೋಧಿಯನ್ನು ಸಹ ಲಭ್ಯಗೊಳಿಸುವ ಉದ್ದೇಶದಿಂದ ಪಡಿತರ ಚೀಟಿ 1ಕ್ಕೆ ಮಾಹೆಯಾನ 10 ಕೆ.ಜಿ. ಅತ್ಯುತ್ತಮ ಅಕ್ಕಿ ಅಥವಾ ಪಡಿತರ ಚೀಟಿದಾರರ ಇಚ್ಛೆಯಂತೆ ಅಕ್ಕಿ ಹಾಗೂ ಗೋಧಿಯನ್ನು ಒಟ್ಟು 10 ಕೆ.ಜಿ.ಗೆ ಮೀರದಂತೆ ವಿತರಿಸುವ ಕ್ರಮ ಕೈಗೊಂಡಿದೆ. ಗೋಧಿಯ ರಿಯಾಯಿತಿ ಬೆಲೆ ಕೆ.ಜಿ. 1ಕ್ಕೆ ರೂ. 2-95.

ಕ್ರ. ಸಂ.	ವಿವರಗಳು	ಅಕ್ಕಿ			ಗೋಧಿ
		ಅತ್ತುತ್ತಮ	ಉತ್ತಮ	ಸಾಮಾನ್ಯ	
		1-4-94 ರಿಂದ ಜಾರಿಗೆ ಬಂದಿರುವಂತೆ			
01	ನಾನ್ ಡಿಪಿಎಪಿ : ಐಟಿಡಿಪಿ:ನಾನ್ ಆರ್ಡಿಎಸ್ ಪ್ರದೇಶಗಳಲ್ಲಿ (ಪಟ್ಟಣ)	245-15	223-75	162-55	137-00
02.	ನಾನ್ ಡಿಪಿಎಪಿ : ಐಟಿಡಿಪಿ:ಗ್ರಾಮಾಂತರ ನಾನ್ ಆರ್‌ಪಿಡಿಎಸ್)	242-65	221-25	160-05	137-00

03.	ಡಿಪಿಎಪಿ:ಐಟಿಡಿಪಿ ಪ್ರದೇಶಗಳಲ್ಲಿ (ಪಟ್ಟಣ) ಆರ್ಡಿಡಿಎಸ್:	195-15	173-75	112-55	87-00
04.	ಡಿಪಿಎಪಿ:ಐಟಿಡಿಪಿ ಪ್ರದೇಶಗಳಲ್ಲಿ (ಆರ್ಡಿಡಿಎಸ್) ಗ್ರಾಮಾಂತರ	192-65	171-25	110-05	87-00
		1-4-95 ರಿಂದ ಜಾರಿಗೆ ಬಂದಿರುವಂತೆ			15-7-95 ರಿಂದ ಜಾರಿಗೆ ಬಂದಿರುವಂತೆ
01.	ನಾನ್ ಆರ್ಡಿಡಿಎಸ್ (ನಾನ್ ಐಟಿಡಿಪಿ:ಡಿಪಿಎಪಿ (ಪಟ್ಟಣ)	370-15	348-75	287-55	137-00
02.	ನಾನ್ ಆರ್ಡಿಡಿಎಸ್ (ನಾನ್ ಐಟಿಡಿಪಿ:ಡಿಪಿಎಪಿ (ಗ್ರಾಮಾಂತರ)	367-65	346-25	285-05	137-00
03.	ಆರ್ಡಿಡಿಎಸ್ (ಐಟಿಡಿಪಿ:ಡಿಪಿಎಪಿ) ಪಟ್ಟಣ	320-15	298-75	237-55	87.00
04.	-"-(ಗ್ರಾಮಾಂತರ)	317-65	296-25	235-05	87-00

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಐ.ಟಿ.ಡಿ.ಪಿ. ಮತ್ತು ಡಿ.ಪಿ.ಎ.ಪಿ. ತಾಲ್ಲೂಕುಗಳಿಗೆ ಕೇಂದ್ರ ಸರ್ಕಾರ ಹೆಚ್ಚಿನ ರಿಯಾಯಿತಿ ಕೊಡುತ್ತಿದ್ದು ರಾಜ್ಯ ಸರ್ಕಾರ ಇದಕ್ಕೆ ವ್ಯತಿರಿಕ್ತವಾಗಿ ಈ ತಾಲ್ಲೂಕುಗಳಿಗೆ ಕಡಿಮೆ ಸಹಾಯನಧನವನ್ನು ಕೊಡುತ್ತಿರುವುದು ಸರಿಯೇ? ಗೋಧಿಗೆ ಪ್ರತಿ ಕೆ.ಜಿ.ಗೆ 77 ಪೈಸೆ ಸಹಾಯಧನ, ಅದೇ ಅಕ್ಕಿಗೆ ಪ್ರತಿ ಕೆ.ಜಿ.ಗೆ 3-20 ರೂ. ಸಹಾಯಧನ ಕೊಡುತ್ತಿದ್ದು ಗೋಧಿಯನ್ನು ಹೆಚ್ಚು ಉಪಯೋಗಿಸುವ ಉತ್ತರ ಕರ್ನಾಟಕದ ಜನರಿಗೆ ಇದರಿಂದ ಅನ್ಯಾಯವಾಗುವುದಿಲ್ಲವೆ? 3ನೆಯದು ಈ ತಾರತಮ್ಯವನ್ನು ಹೋಗಲಾಡಿಸಿ ಅಕ್ಕಿ ಮತ್ತು ಗೋಧಿಗೆ ಒಂದೇ ತರಹದ ಸಹಾಯಧನ ನೀಡುವಲ್ಲಿ ಸರ್ಕಾರಕ್ಕೆ ಇರುವ ತೊಂದರೆ ಏನು?

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಒದಗಿಸಿಕೊಟ್ಟಿದ್ದೇವೆ. ಗೋಧಿಯನ್ನು 2-95 ಪೈಸೆ ಕೊಡಲಾಗುತ್ತಿದೆ. ಅದಕ್ಕೆ ಸಹಾಯಧನ 0-87 ಪೈಸೆ, ಅಕ್ಕಿಗೆ 3-70 ಪೈಸೆ ಸಹಾಯಧನವನ್ನು ಕೊಡುತ್ತಾ ಇದ್ದೇವೆ. ಒಟ್ಟು ಸಹಾಯಧನದ ಪದ್ಧತಿಯಲ್ಲಿ ಸೀಲಿಂಗ್ 10 ಕೆ.ಜಿ. ಇದರಲ್ಲಿ ಒಟ್ಟು ಗೋಧಿಯನ್ನಾದರೂ ತೆಗೆದುಕೊಳ್ಳಬಹುದು ಅಥವಾ ಅಕ್ಕಿಯನ್ನಾದರೂ ತೆಗೆದುಕೊಳ್ಳಬಹುದು ಎನ್ನುವ ನೀತಿಯನ್ನು ಸರ್ಕಾರ ಅನುಸರಿಸಿದ ಒಂದು ಆಜ್ಞೆಯನ್ನು ಹೊರಡಿಸಿದೆ. ಇದರಲ್ಲಿ ಯಾವ ತಾರತಮ್ಯವೂ ಇಲ್ಲ ಎಂದು ಮಾನ್ಯ ಸದಸ್ಯರಿಗೆ ತಿಳಿಸಲಿಚ್ಚಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ನಾನು ಕೇಳಿದ ಪ್ರಶ್ನೆ ಮಾನ್ಯ ಸಚಿವರಿಗೆ ಸರಿಯಾಗಿ ತಿಳಿಯುವ ರೀತಿಯಲ್ಲಿ ನಾನು ಕೇಳಲಿಲ್ಲ ಎಂದು ಕಾಣಿಸುತ್ತೆ. ಅದಕ್ಕಾಗಿ ಇನ್ನೊಮ್ಮೆ ಕೇಳುತ್ತೇನೆ. ಐಬಿಡಿಪಿ ಮಮತ್ತು ಡಿಪಿಎಪಿ ತಾಲ್ಲೂಕುಗಳಿಗೆ ಕೇಂದ್ರ ಸರ್ಕಾರದವರು ಹೆಚ್ಚಿನ ರಿಯಾಯಿತಿ ಕೊಡುತ್ತದೆ. ಪ್ರತಿ ಕೆ.ಜಿ.ಗೆ 50 ಪೈಸೆ ಹೆಚ್ಚಿನ ರಿಯಾಯಿತಿ ಕೇಂದ್ರ ಸರ್ಕಾರ ಕೊಡುತ್ತದೆ. ರಾಜ್ಯ ಸರ್ಕಾರ ಈ ತಾಲ್ಲೂಕುಗಳಿಗೆ

ಹೆಚ್ಚಿನ ರಿಯಾಯಿತಿ ಕೊಡುವ ಬದಲು ಕಡಿಮೆ ರಿಯಾಯಿತಿ ಕೊಡುತ್ತಾ ಇದೆ. ಇದು ನೀವು ಕೊಟ್ಟ ಉತ್ತರದ ಪ್ರಕಾರವೇ ಇದೆ. 2ನೆಯದಾಗಿ ಗೋಧಿಗೆ ನೀವು ಪ್ರತಿ ಕೆಜಿಗೆ 87 ಪೈಸೆ ಸಹಾಯಧನ ಕೊಡುತ್ತೀರಿ. ಅದನ್ನು ಅಕ್ಕಿಗೆ 3-20 ಪೈಸೆ ಕೊಡುತ್ತೀರಿ. ನಾವು ಉತ್ತರ ಕರ್ನಾಟಕದವರು ಗೋಧಿಯನ್ನು ಹೆಚ್ಚಿಗೆ ಬಳಕೆ ಮಾಡುತ್ತೇವೆ. ನಮಗೆ ಕಡಿಮೆ ಸಹಾಯಧನ ಕೊಟ್ಟು ಅಕ್ಕಿಯನ್ನು ಹೆಚ್ಚು ಬಳಕೆ ಮಾಡುವ ಜನರಿಗೆ ಹೆಚ್ಚು ಸಹಾಯಧನ ಕೊಟ್ಟ ಹಾಗೆ ಆಗುತ್ತದೆ. ಇದು ತಾರತಮ್ಯ ಆಗುತ್ತದೆ. ಎರಡಕ್ಕೂ ಒಂದೇ ದರದಲ್ಲಿ ಸಹಾಯಧನ ಕೊಡಲಿಕ್ಕೆ ಆಗುತ್ತದೆಯೇ ಎಂದು ನಾನು ಕೇಳಿದ್ದೇನೆ.

ಶ್ರೀ ಎಸ್. ನಂಜಪ್ಪ : ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಇದರಲ್ಲಿ ಪರಿಶೀಲಿಸುವುದು ಏನು ಇದೆ. ಆಗುತ್ತದೆ ಎಂದು ಹೇಳಬೇಕು ಅಥವಾ ಇಲ್ಲ ಎಂದು ಹೇಳಬೇಕು. ಗೋಧಿಗೆ 87 ಪೈಸೆ ಸಬ್ಸಿಡಿ ಕೊಡುತ್ತಾರೆ. ಅಕ್ಕಿಗೆ 3-20 ಪೈಸೆ ಸಬ್ಸಿಡಿ ಕೊಡುತ್ತಾರೆ. ನಾವು ಗೋಧಿ ಹೆಚ್ಚು ತಿನ್ನುವವರು ಉತ್ತರ ಕರ್ನಾಟಕದವರು. ನಮಗೂ ಸಬ್ಸಿಡಿ 3-20 ಪೈಸೆ ಕೊಡಿ. ಅದೇ ಅಕ್ಕಿಯನ್ನು 10 ಕೆ.ಜಿ. ತೆಗೆದುಕೊಂಡರೆ 3-20 ಪೈಸೆಗೆ ಕೊಡುತ್ತಾರೆ. ಗೋಧಿಗೆ 87 ಪೈಸೆ ಅಷ್ಟೇ ಸಹಾಯಧನ ಕೊಡುತ್ತೇವೆ ಅಂತ ಹೇಳುತ್ತಾರೆ. ಅಷ್ಟೇ ಇದರಲ್ಲಿ ಪರಿಶೀಲನೆ ಏನು ಇದೆ ಸ್ವಾಮಿ. ಮಾಡುತ್ತೇವೆ, ಎರಡಕ್ಕೂ ಒಂದೇ ತರಹದ ಸಹಾಯಧನ ಕೊಡುತ್ತೇವೆಂದು ಹೇಳಿದರೆ ಆಯಿತು.

ಶ್ರೀ ಎಸ್. ನಂಜಪ್ಪ : ಇಲ್ಲ, ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ಗೋಧಿಗೆ ಕೊಡುತ್ತಿರತಕ್ಕಂತಹ ಸಹಾಯಧನವನ್ನು ಯಾವುದೇ ತರಹದಲ್ಲಿ ಕಡಿಮೆ ಮಾಡಿಲ್ಲ. ಹಿಂದೆ ಏನು ಕೊಡುತ್ತಾ ಇದ್ದಾರೋ ಅದೇ ಸಬ್ಸಿಡಿಯನ್ನು ನಾವು ಕೊಟ್ಟುಕೊಂಡು ಹೋಗುತ್ತಿದ್ದೇವೆ. ಈಗ ಮಾನ್ಯ ಸದಸ್ಯರು ಅಕ್ಕಿಗೆ ಹೆಚ್ಚಿಗೆ ಸಬ್ಸಿಡಿ ಕೊಡುತ್ತಿದ್ದೀರಿ, ಗೋಧಿಗೆ ಇನ್ನೂ ಹೆಚ್ಚಿನ ಸಬ್ಸಿಡಿ ಕೊಡಬೇಕೆಂದು ಹೇಳುತ್ತಿದ್ದಾರೆ. ನನ್ನ ಅನುಭವದಲ್ಲಿ ಗೋಧಿಗೆ ಹೆಚ್ಚಿನ ಬೇಡಿಕೆ ಉತ್ತರ ಕರ್ನಾಟಕದಲ್ಲಿ ಇದೆ ಎಂದು ಅವರು ಹೇಳುತ್ತಿದ್ದಾರೆ ಬೇಡಿಕೆ ಇರುವುದು ಜೋಳಕ್ಕೆ, ಗೋಧಿಗೆ ಇಲ್ಲ. ನನ್ನ ಅನುಭವದ ಪ್ರಕಾರ ಹೇಳುತ್ತಿದ್ದೇನೆ. ಗೋಧಿಗೆ ಯಾವ ತರಹದಲ್ಲೂ ಸಹಾಯಧನವನ್ನು ಕಡಿಮೆ ಮಾಡಿಲ್ಲ ಎನ್ನುವ ಮಾತನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಅಕ್ಕಿಗೆ ಸಹಾಯಧನ ಹೆಚ್ಚು ಇರುವುದರಿಂದ ಜನರು ಜಾಣರು ಇದ್ದಾರೆ. ಮಾರ್ಕೆಟ್ಟಿನಲ್ಲಿ ಗೋಧಿಗೆ ನಾವು ಖರೀದಿ ಮಾಡಿದಾಗ ನಾವು ಕೊಡಬೇಕಾದಂತಹ ಹಣ ಸ್ವಲ್ಪ ಹೆಚ್ಚು ಆಗುತ್ತದೆ. ಅದೇ ಅಕ್ಕಿಯನ್ನು ಖರೀದಿ ಮಾಡಿದಾಗ ಕೊಡಬೇಕಾಗುವ ಹಣ ಹೆಚ್ಚಾಗುತ್ತದೆ. ನೀವು ಅಕ್ಕಿಗೆ ಹೆಚ್ಚು ಇಟ್ಟಿರುವುದರಿಂದ ಅಕ್ಕಿಯ ಆಫ್ಟೇಕ್ ಜಾಸ್ತಿ ಆಗುತ್ತದೆ. ನೀವು ಅಕ್ಕಿ ಮತ್ತು ಗೋಧಿಗೆ ಒಂದೇ ಸಹಾಯಧನವನ್ನು ತಂದ್ರಿ ಅಂದರೆ ಗೋಧಿ ಆಫ್ಟೇಕ್ ಹೆಚ್ಚಾಗುತ್ತದೆ. ಮತ್ತು ಗೋಧಿ ಅಕ್ಕಿಗಿಂತ ಹೆಚ್ಚು ನ್ಯೂಟ್ರಿಷನ್. ಅದಕ್ಕೆ ದಯವಿಟ್ಟು ಸರ್ಕಾರ ಪರಿಶೀಲನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ.

ಶ್ರೀ ಎಸ್. ನಂಜಪ್ಪ : ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸಲಾಗುತ್ತದೆ. ಅಕ್ಕಿಗೆ 3-20 ಪೈಸೆ ಕೊಡುತ್ತಾ ಇದ್ದೇವೆ. ಗೋಧಿಗೆ ಕಡಿಮೆ ಎಂದರೆ 2-95 ಪೈಸೆಗೆ ಕೊಡುತ್ತಾ ಇದ್ದೇವೆ. ತಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.